ಕರ್ನಾಟಕ ಸರ್ಕಾರ

ಸಂ:ಸಾರಿಇ 217 ಸಾಇಪ 2012

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:05-12-2012

## ಅಧಿಸೂಚನೆ

ಮೋಟಾರು ವಾಹನಗಳ ಅಧಿನಿಯಮ 1988 (ಕೇಂದ್ರ ಅಧಿನಿಯಮ ಸಂ. 59/1988)ರ ಕಲಂ 67ರ ಉಪ ಕಲಂ (1)(i)ರಡಿ ಕರ್ನಾಟಕ ಸರ್ಕಾರವು ಹೊರಡಿಸಿದ ಅಧಿಸೂಚನೆ ಸಂ. ಸಾರಿಇ 300 ಸಾಇಪ 2007, ದಿನಾಂಕ: 28-10-2011ರಲ್ಲಿ ರಾಜ್ಯದ ನಗರ ಪ್ರದೇಶಗಳಲ್ಲಿ ಹವಾನಿಯಂತ್ರಿತ ಸಿಟಿ ಟ್ಯಾಕ್ಸಿಗಳಿಗೆ ಕನಿಷ್ಠ ಮತ್ತು ಗರಿಷ್ಠ ದರಗಳು ಮತ್ತು ಸಾಗಾಣಿಕೆ ದರಗಳನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡಿತ್ತು.

ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಇಂಧನ ಬೆಲೆಗಳನ್ನು ಹೆಚ್ಚಿಸಿರುವುದರಿಂದ ವಾಹನಗಳ ಬೆಲೆ ಮತ್ತು ನಿರ್ವಹಣಾ ವೆಚ್ಚಗಳು ಗಣನೀಯವಾಗಿ ಹೆಚ್ಚಾಗಿರುವುದರಿಂದ, ಅಲ್ಲದೆ ವಿವಿಧ ಮಾದರಿಯ ಟ್ಯಾಕ್ಸಿಗಳು (ಹವಾನಿಯಂತ್ರಿತ) ಹೆಚ್ಚಿನ ಸಂಖ್ಯೆಯಲ್ಲಿ ಆಚರಣೆ ಮಾಡುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಸಿಟಿ ಟ್ಯಾಕ್ಸಿ (ಮೋಟಾರ್ ಕ್ಯಾಬ್) ಗಳ ದರ ಮತ್ತು ಸಾಗಾಣಿಕೆ ದರಗಳನ್ನು ಪರಿಷ್ಕರಿಸುವಂತೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳಿಗೆ ನಿರ್ದೇಶನ ನೀಡುವುದು ಅಗತ್ಯವೆಂದು ಕರ್ನಾಟಕ ಸರ್ಕಾರವು ಪರಿಗಣಿಸಿ ಮೋಟಾರು ವಾಹನಗಳ ಅಧಿನಿಯಮ 1988ರ (ಕೇಂದ್ರ ಅಧಿನಿಯಮ 59/1988) ಕಲಂ 67ರ ಉಪ ಕಲಂ (1)(i) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ದಿನಾಂಕ:28-10-2011ರ ಅಧಿಸೂಚನೆಯಲ್ಲಿ ನೀಡಲಾದ ನಿರ್ದೇಶನಗಳಲ್ಲಿ ಟ್ಯಾಕ್ಸಿ ದರ ಮತ್ತು ಸಾಗಾಣಿಕೆ ದರಗಳಿಗೆ ಸಂಬಂಧಿಸಿದಂತೆ ಭಾಗಶ: ಮಾರ್ಪಾಡಿನೊಂದಿಗೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

## ನಿರ್ದೇಶನಗಳು

ಕರ್ನಾಟಕ ರಾಜ್ಯದಲ್ಲಿ ಆಚರಣೆ ಮಾಡುವ ಹವಾನಿಯಂತ್ರಿತ, 1200 ಸಿ.ಸಿ.ಗಿಂತ ಹೆಚ್ಚಿನ ಸಾಮರ್ಥ್ಯ ಇರುವ ಮತ್ತು ನಗರ ಮಿತಿಯಿಂದ 25 ಕಿ.ಮೀ. ಪರಧಿಯೊಳಗೆ ಸಂಚರಿಸುವ ಸಿಟಿ ಟ್ಯಾಕ್ಸಿಗಳಿಗೆ ಈ ಕೆಳಕಂಡಂತೆ ಬಾಡಿಗೆ ಹಾಗೂ ಸಾಗಾಣಿಕೆ ದರಗಳನ್ನು ಕೂಡಲೇ ಜಾರಿಗೆ ಬರುವಂತೆ ನಿಗಧಿಪಡಿಸಲು ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

| | ಕನಿಷ್ಠ | ಪ್ರತಿ ಕಿ.ಮೀ.ಗೆ |
|---|---|---|
| ಬಾಡಿಗೆ ದರಗಳು<br>ಹವಾ ನಿಯಂತ್ರಿತ ಟ್ಯಾಕ್ಸಿ | ರೂ. 80.00 (4 ಕಿ.ಮೀ.) | ರೂ. 19.50 |

| | |
|---|---|
| ಕಾಯುವಿಕೆ ದರಗಳು | ಮೊದಲಿನ 20 ನಿಮಿಷಗಳವರೆಗೆ ಉಚಿತ. ನಂತರದ ಪ್ರತಿ 15 ನಿಮಿಷಗಳಿಗೆ ಅಥವಾ ಅದರ ಭಾಗಕ್ಕೆ ರೂ. 10/- |
| ಲಗೇಜ್ ದರಗಳು | ಮೊದಲಿನ 120 ಕೆ.ಜಿ.ವರೆಗೆ ಉಚಿತ (ಸೂಟ್‌ಕೇಸ್, ಬೆಡ್ಡಿಂಗ್ ಇತ್ಯಾದಿ ವೈಯಕ್ತಿಕ ಲಗೇಜ್‌ಗಳು) ನಂತರದ ಪ್ರತಿ 20 ಕಿ.ಗ್ರಾ. ಗೆ ಅಥವಾ ಅದರ ಭಾಗಕ್ಕೆ ರೂ. 5/- |
| ರಾತ್ರಿ ದರಗಳು | ರಾತ್ರಿ 12 ಗಂಟೆಯಿಂದ ಬೆಳಗಿನ 6 ಗಂಟೆಯವರೆಗೆ ಸಂಚರಿಸುವ ಟ್ಯಾಕ್ಸಿಗಳಿಗೆ ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಹೆಚ್ಚು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಬೀರೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ

ಇವರಿಗೆ:-

ಸಂಕಲನಾಧಿಕಾರಿ, ಕರ್ನಾಟಕ ವಿಶೇಷ ರಾಜ್ಯಪತ್ರ, ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 200 ಪ್ರತಿಗಳನ್ನು ಪೀಠಾಧಿಕಾರಿ, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸುವಂತೆ ಕೋರಿದೆ.

ಪ್ರತಿಗಳು:

1) ಮಹಾಲೇಖಪಾಲರು (Audit & Entitlement) ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು.
3) ಎಲ್ಲಾ ಜಂಟಿ ಆಯುಕ್ತರು/ಉಪ ಸಾರಿಗೆ ಆಯುಕ್ತರು, ಸಾರಿಗೆ ಇಲಾಖೆ (ಸಾರಿಗೆ ಆಯುಕ್ತರ ಕಛೇರಿಯ ಮುಖಾಂತರ).
4) ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ, ಬೆಂಗಳೂರು.
5) ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಸಾರಿಗೆ ಆಯುಕ್ತರ ಮುಖಾಂತರ).
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.